## ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ
## ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕೆ ಪತ್ರ ಬರೆಯಬಹುದು

ನಮ್ಮ ವಿಳಾಸ :
**ದ ಕ್ರಿಸ್ಟಡೆಲ್ಫಿಯನ್ಸ್**
ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್
ಬೆಂಗಳೂರು - 560 005

# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 13

* ದೇವರ ಹೊಸ ಸಮಾಜ
* ಸಭೆಯ ನಿಜವಾದ ಅರ್ಥ
* ಅನ್ಯೋನ್ಯತೆಯ ಅರ್ಥ ಮತ್ತು ಇದರ ಫಲಿತಾರ್ಥಗಳು
* ವಿಕಾಸವಾದದಲ್ಲಿ ನಂಬಿಕೆಯನ್ನಿಟ್ಟಿರುವವರಿಗೆ ಕರಡಿಗಳ ಬಗ್ಗೆ ಸತ್ಯಸಂಗತಿಗಳು
* ಪ್ರೀತಿಯ ಬಂಧನಗಳು
* ಮೊದಲನೇ ಶತಮಾನದ ಕ್ರೈಸ್ತತ್ವ

### ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

**ನೂತನ ಸೃಷ್ಟಿ ಪತ್ರಿಕೆಯ ತಂಡ**

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ಜೇಮ್ಸ್.ಡಿ, ರಾಜ್‌ಕುಮಾರ್, ಲಿಲಿಯನ್ ಮತ್ತು ಕಿರಣ್ } ಭಾಷಾಂತರಕಾರರು


**Co-ordinator : Linus Daniel**

**e-mail :**
**info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ದೇವರ ಹೊಸ ಸಮಾಜ

## ಸಮಯದ ಪ್ರಯಾಣ

ನಾವು ನಮ್ಮ ಕಲ್ಪನೆಯ ಪ್ರಯಾಣ ಮಾಡಲು ಸಮಯದ ಯಂತ್ರಕ್ಕೆ ಹತ್ತೋಣ ಮತ್ತು ಕ್ರಿ.ಶ. 60ರ ಹಿಂದಿನ ವರ್ಷಕ್ಕೆ ಹೋಗಿ ಶೀಘ್ರ ಪ್ರಯಾಣ ಮಾಡೋಣ. ರೋಮ್ ಪ್ರಾಂತ್ಯದ ಇಂದು ಟರ್ಕಿ ಎಂದು ಕರೆಯಲ್ಪಡುವ ಪಟ್ಟಣಕ್ಕೆ ಬೇಟಿಕೊಡಲು ಹೋಗುತ್ತಿದ್ದೇವೆ. ಇದಕ್ಕೆ ಕೊಲೊಸ್ಸಿಯಾ ಎಂದು ಕೂಡ ಹೆಸರಿತ್ತು.

ಅಂದು ಭಾನುವಾರ ವಾರದ ಮೊದಲನೆಯ ದಿನ, ನಾವು ಫಿಲೆಮೋನ ಎಂಬ ಆಗರ್ಭ ಶ್ರೀಮಂತನ ಬೇಟಿಗಾಗಿ ಸಮಯವನ್ನು ಪಡಕೊಂಡೆವು. ಆತನಿಗೆ ರಮಣೀಯವಾದ ಸುಂದರ ಮನೆಯಿತ್ತು. ಅದು ಇಟಲಿ ದೇಶದ ಪಾಂಪೆ ಎನ್ನುವ ಪಟ್ಟಣದಲ್ಲಿತ್ತು. ಇದು ಸುಮಾರು ಕ್ರಿ.ಶ.79ರಲ್ಲಿ ವೆಸುವೈವಸನಿಂದ ನಾಶಮಾಡಲ್ಪಟ್ಟಿತು.



ಫಿಲೆಮೋನ ಈತನು ಸ್ಥಳೀಯ ಕ್ರೈಸ್ತರೊಂದಿಗೆ ಸೇರಿ ಅತಿಥಿ ಸತ್ಕಾರ ಮಾಡುತ್ತಿದ್ದನು. ಹೊಸಒಡಂಬಡಿಕೆಯಲ್ಲಿನ "ರೊಟ್ಟಿ ಮುರಿಯುವ"ಕಾರ್ಯದ ನಿಮಿತ್ತ ಅವರೆಲ್ಲರು ಒಟ್ಟಾಗಿ ಸೇರಿ ಕ್ರಿಸ್ತನ ಸಮರ್ಪಣೆಯನ್ನು ಜ್ಞಾಪಕ ಮಾಡಿಕೊಳ್ಳುತ್ತಿದ್ದರು(1ಕೊರಿಂಥ 11:23–26 ನೋಡಿ) ಇದು ಒಂದು ಸಾಮಾನ್ಯವಾದ ಆಚರಣೆಯ ಪದ್ಧತಿಯಾಗಿತ್ತು. ಇದರಲ್ಲಿ ವೇದಭಾಗ ಓದುವುದು, ಪ್ರಾರ್ಥಿಸುವುದು ಮತ್ತು ಸಂಗೀತಗಳ ಮೂಲಕ ದೇವರನ್ನು ಸ್ತುತಿಸುವುದನ್ನು ಒಳಗೊಂಡಿತ್ತು.

**ಮಿಶ್ರ ಸಮಾಜ :–**

ಜನರು ಒಟ್ಟಿಗೆ ಸೇರಿಬರುವುದು ಒಂದು ರೂಢಿಯಾಗಿತ್ತು. ಅಲ್ಲಿ ಫಿಲೆಮೋನ ಎನ್ನುವ ಶ್ರೀಮಂತ ವ್ಯಕ್ತಿ ಆತಿಥ್ಯ ವಹಿಸುತ್ತಿದ್ದನು ಮತ್ತು ಇನ್ನೊಬ್ಬ ವ್ಯಕ್ತಿ ಒನೇಸಿಮ ಎನ್ನುವವನು ಅವರಿಬ್ಬರೂ ಸಮಾನ ರೀತಿಯಲ್ಲಿದ್ದು ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಪಾಲು ತೆಗೆದುಕೊಳ್ಳುತ್ತಿದ್ದರು.

ಇದು ರೋಮನ್ ಸಮಾಜದಲ್ಲಿ ಅಸಾಧಾರಣಾ ಪದ್ದತಿಯಾಗಿತ್ತು. ಏಕಂದರೆ ದಾಸ(ಗುಲಾಮರಿಗೆ) ಇಂತಹ ಹಕ್ಕುಗಳಿರಲಿಲ್ಲ. ಹಲವು ಬಾರಿ ತನ್ನ ಯಜಮಾನನಿಂದ ಪ್ರಾಣಿಗಳಂತೆ ಅವರು ನಡಿಸಿಕೊಳ್ಳುತ್ತಿದರು, ಇದು ಸತ್ಯಸಂಗತಿ. ಕೆಲವರು ಮಾನವೀಯತೆ ಇರುವಂತವರು ತನ್ನ ದಾಸರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು. ಆದರೆ ಅಪರಾಧಿಯಾದ ದಾಸನನ್ನು ಅನೇಕ ಸಂದರ್ಭಗಳಲ್ಲಿ ಮರಣಕ್ಕೆ ಒಪ್ಪಿಸಿಕೊಡುತ್ತಿದ್ದರು. ದಾಸನು ಓಡಿಹೋದಾಗ ಈ ರೀತಿಯ ಘಟನೆಗಳು ಸಂಭವಿಸುತ್ತಿದ್ದವು. ಇದೇ ರೀತಿಯಾಗಿ ಒನೇಸಿಮನು

ಕೂಡ ಮಾಡಿದ್ದನು. ಇಂತಹ ಆಶ್ಚರ್ಯಕರವಾದ ಸಂದರ್ಭ ಹೇಗೆ ಇದ್ದವು ಎನ್ನುವಂಥದ್ದು ನಮ್ಮನ್ನು ನಾವು ಕೇಳಿಕೊಳ್ಳಬೇಕು.

**ಫಿಲೆಮೋನನಿಗೆ ಪತ್ರ :–**

ನಮಗೆ ಉತ್ತರ ಸಿಗಬೇಕಾದರೆ ನಾವು ಸಂಕ್ಷಿಪ್ತವಾಗಿ ಪ್ರಮುಖವಾದ ಬರವಣಿಗೆಯ ಮುಖಾಂತರ ಹೋಗಬೇಕು. ಒನೇಸಿಮನ ಯಜಮಾನನಾಗಿರುವ ಫಿಲೆಮೋನನಿಗೆ ಅಪೋಸ್ತಲನಾದ ಪೌಲನು ಈ ಪತ್ರವನ್ನು ಬರೆದಿದ್ದಾನೆ. ಇದು ಚಿಕ್ಕ ಪತ್ರವಾಗಿದ್ದರೂ ಬಹಳ ಉಪಯೋಗವಾಗುವ ಸಂಗತಿಗಳು ಇದರಲ್ಲಿವೆ. ಅನೇಕ ಸಂಗತಿಗಳನ್ನು ಇದು ತಿಳಿಸಿಕೊಡುತ್ತದೆ. ಆದರೆ ಅಪೋಸ್ತಲನಾದ ಪೌಲನು ರೋಮ್ ದೇಶದಲ್ಲಿ ಸೆರೆಯವನಾಗಿ ಇರುವಾಗ ರೋಮ್ ಚಕ್ರವರ್ತಿ ಎದುರುಗಡೆ ತನ್ನ ವಿಚಾರಣೆಗಾಗಿ ಬರಲು ತನ್ನ ಸರದಿಗಾಗಿ ಕಾಯಬೇಕಾಗಿತ್ತು. ಈತನ ವಿರುದ್ಧವಾಗಿ ಮಾಡಿರುವ ಆಪಾದನೆಗಳಿಗೆ ಉತ್ತರ ಕೊಡುವ ಪರಿಸ್ಥಿತಿಯಲ್ಲಿರುವಾಗ ಈ ಪತ್ರ(ಫಿಲೆಮೋನನಿಗೆ ಬರೆದ ಪತ್ರ) ಬರೆದನು ಎನ್ನುವಂಥದ್ದು ನಾವು ಅರ್ಥ ಮಾಡಿಕೊಳ್ಳಬೇಕು.

ಸೆರೆಮನೆಯಲ್ಲಿರುವಾಗ ಅನೇಕ ಒಪ್ಪಂದಗಳು ಸರಳವಾಗಿದ್ದವು–ಸುವಾರ್ತೆ ಸಾರಲು, ತನ್ನ ಸ್ನೇಹಿತರನ್ನು ಸ್ವೀಕರಿಸಲು ಸ್ವಾತಂತ್ರ್ಯವಿತ್ತು. ಹೀಗಿರುವ ಪರಿಸ್ಥಿತಿಯಲ್ಲಿ ಪೌಲನು ರೋಮಿನಲ್ಲಿ ಒನೇಸಿಮ ಎನ್ನುವ ವ್ಯಕ್ತಿಯೊಡನೆ ಸಂಪರ್ಕ ಪಡೆದನು. ನಂತರ ಒನೇಸಿಮನು ತನ್ನ ಯಜಮಾನ ಫಿಲೆಮೋನ ಕೂಡ ಪೌಲನ ಮುಖಾಂತರ ಕ್ರಿಸ್ತನವನಾಗಿ ಪರಿವರ್ತನೆ ಹೊಂದಿದವನು ಎಂಬುದನ್ನು ತಿಳಿದುಕೊಂಡಿದ್ದನು. ಪೌಲನು ರೋಮಿನಲ್ಲಿ ಸೆರೆಯವನಾಗಿದ್ದು ಆತನೊಟ್ಟಿಗೆ ಸಂಪರ್ಕ ಮಾಡಿದ್ದನು ಎಂದು ತಿಳಿದುಕೊಂಡಿದ್ದನು.

**ಓಡಿ ಹೋಗಿದ್ದ ದಾಸನು :–**

ಫಿಲೆಮೋನನಿಗೆ ಕಳುಹಿಸಿದ ಈ ಪತ್ರದಲ್ಲಿ ನಾವು ಏನು ಕಲಿಯುತ್ತೇವೆಂದರೆ, ಕೊಲೊಸ್ಸೆಯಿಂದ ಒನೇಸಿಮನು ತನ್ನ ಯಜಮಾನ ಕೆಲವು ಸ್ವತ್ತುಗಳೊಂದಿಗೆ ಓಡಿ ಹೋಗಿದ್ದನು. ಪೌಲನು ಇದನ್ನು ಬರೆಯುವಾಗ ತುಂಬಾ ಚಾತುರ್ಯದ ಭಾಷೆಯನ್ನು ಉಪಯೋಗಿಸಿದ್ದಾನೆ.



''ಅವನಿಂದ ನೀನು ಏನಾದರೂ ನಷ್ಟಪಟ್ಟಿದ್ದರೆ ಅಥವಾ ಅವನು ಸಾಲವೇನಾದರೂ ತೀರಿಸ ಬೇಕಾಗಿದ್ದರೆ ಅದನ್ನು ನನ್ನ ಲೆಕ್ಕಕ್ಕೆ ಹಾಕು'' (ವಚನ 18).

ಕ್ರಿಸ್ತನ ನಂಬಿಕಿಯಿಂದ ಪರಿವರ್ತನೆ ಹೊಂದಿ ದೀಕ್ಷಾಸ್ನಾನದ ನಂತರ ಒನೇಸಿಮನು ಪೌಲನ ದೊಡ್ಡ ಸೇವೆಯನ್ನು ಸಾಕ್ಷೀಕರಿಸಿದನು. ಅವನನ್ನು ತನ್ನ ಬಳಿಯಲ್ಲಿಯೆ ಇಟ್ಟುಕೊಳ್ಳಲು ಇಚ್ಛೆಯುಳ್ಳವನಾಗಿದ್ದನು(ವಚನ 13), ಆದರೆ ಇದು ತಪ್ಪು ಎಂದು ಗ್ರಹಿಸಿಕೊಂಡು ಆತನನ್ನು ತಿರುಗಿ ಹಿಂದಕ್ಕೆ ಕಳುಹಿಸಿದನು. ಕಳುಹಿಸುವಾಗ ಪತ್ರವನ್ನು ಬರೆದು ಒನೇಸಿಮನನ್ನು ಕೊಲೊಸ್ಸೆಗೆ ಕಳುಹಿಸಲು ನಿರ್ಧರಿಸಿದನು ಮತ್ತು ಪತ್ರದಲ್ಲಿ ಫಿಲೆಮೋನನಿಗೆ ಹಿಂದಿನದನ್ನು ಮರೆತುಬಿಟ್ಟು ಒನೇಸಿಮನನ್ನು ಕ್ಷಮಿಸಿ ಕ್ರಿಸ್ತನಲ್ಲಿ ಸಹೋದರನಂತೆ ಸ್ವಾಗತಿಸು ಎಂದು ಬರೆದನು.



ಇದೇ ರೀತಿಯಲ್ಲಿ ಫಿಲೆಮೋನನು ಬಹು ಪ್ರಾಮುಖ್ಯವಾದ ಕಾರ್ಯಗಳನ್ನು ಮಾಡಿದನು. ಮರೆಯಲಾರದ ಸಂಗತಿಗಳನ್ನು ನೆರವೇರಿಸಿದನು. ಈ ಸುವಾರ್ತೆಯು ಸಮಾಜದ ಅಡೆತಡೆಗಳನ್ನು ತೆಗೆದುಹಾಕಿ ರೋಮನ್ ಪ್ರಪಂಚದಲ್ಲಿ ಒಂದು ಹೊಸ ಸಮಾಜವು ಸೃಷ್ಟಿಯಾಗಿತ್ತು ಎಂದು ತಿಳಿಸುತ್ತದೆ.

**ಸಹ ಪ್ರಯಾಣಿಕ :–**

ಒನೇಸಿಮನು ರೋಮಿನಿಂದ ಕೊಲೊಸ್ಸೆಗೆ ಪ್ರಯಾಣ ಪ್ರಾರಂಭಿಸಿದಾಗ ಒಬ್ಬಂಟಿಗನಾಗಿ ಹೋಗದೆ ತುಖಿಕನನ್ನು ತನ್ನ ಜೊತೆಗಾರನನ್ನಾಗಿ ಮಾಡಿಕೊಂಡು ಹೋದನು (ಕೊಲೊಸ್ಸೆ 4:7–9 ನೋಡಿರಿ). ಈತನು ಕೊಲೊಸ್ಸೆಯಲ್ಲಿರುವ ವಿಶ್ವಾಸಿಗಳಿಗೆ ಪೌಲನ ಪತ್ರಗಳನ್ನು ತನ್ನೊಂದಿಗೆ ತೆಗೆದುಕೊಂಡು ಬಂದಿದ್ದನು(ಕೊಲೊಸ್ಸೆ 1:2). ವಾರದ ಮೊದಲನೆಯ ದಿನದಂದು ರೊಟ್ಟಿ ಮುರಿಯುವ ಕಾರ್ಯಕ್ಕೆ ವಿಶ್ವಾಸಿಗಳೆಲ್ಲರು ಸೇರಿಬರುವಾಗ ಸಭೆಯಲ್ಲಿ ಈ ಪತ್ರಗಳನ್ನು ಓದುವುದು ಅಭ್ಯಾಸವಾಗಿತ್ತು. ಇಂತಹ ವಿಷಯಗಳಲ್ಲಿ ಪೌಲನು ಮುಂದಾಲೋಚನೆ ಹೊಂದಿರದಿದ್ದರೆ ಈ ಪತ್ರಗಳನ್ನು ಬರೆಯದೆ ಇದ್ದಿದ್ದರೆ ಅತಿಶಯೋಕ್ತಿ ಆಗಿರುತಿತ್ತು.

ಫಿಲೆಮೋನ ಮತ್ತು ಒನೇಸಿಮನು ಪತ್ರಗಳನ್ನು ಓದಲು ತಲ್ಲೀನರಾಗಿದ್ದರು. ಕೊಲೊಸ್ಸೆಯವರಿಗೆ 3ನೇ ಅಧ್ಯಾಯದಲ್ಲಿ ವಿಶ್ವಾಸಿಗಳು(ಎಲ್ಲಾ ವಯಸ್ಸಿನವರು) ಹೊಸ ಜೀವನ ನಡೆಸುತಿದ್ದಾರೆ ಎಂಬುದನ್ನು ಸ್ಮರಿಸುತ್ತಾನೆ. ಭೂಲೋಕದವುಗಳ ಮೇಲೆ ಮನಸ್ಸಿಡಬೇಡಿರಿ ಮೇಲಿನವುಗಳ ಮೇಲೆ ಮನಸ್ಸಿಡಿರಿ ಎಂದು ಪೌಲನು ಅವರಿಗೆ ತಿಳಿಸಿದ್ದಾನೆ.

''ನೀವು ಸತ್ತಿರಲ್ಲಾ ನೀಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಾದೆ'' (ಕೊಲೊಸ್ಸೆ 3:2–3). ಇಲ್ಲಿ ಒಂದು ಹೊಸ ಸಮಾಜ ಎನ್ನುವ ಪರಿಕಲ್ಪನೆಯನ್ನು ನಿಶ್ಚಯವಾಗಿ ಕಾಣುತ್ತೇವೆ. ಇದು ತಮ್ಮ ಹಳೇ ಜೀವಿತ ಬಿಟ್ಟು ಕ್ರಿಸ್ತಯೇಸುವಿನಲ್ಲಿ ಹೊಸಬರಾಗಿ ಜೀವಿಸಬೇಕೆನ್ನುವ ಹೆಂಗಸರು ಮತ್ತು ಗಂಡಸರ ಮಧ್ಯದಲ್ಲಿ ಸ್ಥಾಪಿಸಲ್ಪಟ್ಟಿತು. ಇದನ್ನು ಕುರಿತು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆ ಅಧ್ಯಾಯ 3ರಲ್ಲಿ ಒತ್ತಿಹೇಳಲಾಗಿದೆ.

''ಗ್ರೀಕನು ಯೆಹೂದ್ಯನು ಎಂಬ ಭೇದವಿಲ್ಲ, ಸುನ್ನತಿ ಮಾಡಿಸಿಕೊಂಡವರು ಮಾಡಿಸಿಕೊಳ್ಳದವರು ಎಂಬ ಭೇದವಿಲ್ಲ. ಮ್ಲೇಚ್ಛ ಹೂಣ ಎಂಬ ಹೆಸರುಗಳಿಲ್ಲ, ಆಳು ಒಡೆಯ ಎಂಬ ಭೇದವಿಲ್ಲ. ಆದರೆ ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತವು ಆಗಿರುವನು. ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವುದರಿಂದ ಕನಿಕರ, ದಯೆ, ದೀನಭಾವ, ಸಾತ್ವಿಕತ್ವ, ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ. ಮತ್ತೊಬ್ಬರ ಮೇಲೆ ತಪ್ಪು ಹೊರಿಸುವುದಕ್ಕೆ ಕಾರಣಗಳಿದ್ದರೂ ತಪ್ಪು ಹೊರಿಸದೆ ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವು ಕ್ಷಮಿಸಿರಿ ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ ಅದು ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ'' (ಕೊಲೊಸ್ಸೆಯವರಿಗೆ 3:11–14).

ಈ ವ್ಯಾಕ್ಯಗಳನ್ನು ಓದುತ್ತಿದ್ದಂತೆ ಫಿಲೆಮೋನ ಒನೇಸಿಮನ ಕಡೆಗೆ ತಿರುಗಿ ಇಬ್ಬರು ಕೇಳಿಸಿಕೊಂಡಿರುವ ವಿಷಯಗಳಿಗೆ ಸಮ್ಮತಿ ಸೂಚಿಸಿದಂತೆ ತಲೆಆಡಿಸಿದರು ಮತ್ತು ಆತನ ಮುಖದಲ್ಲಿ ಪ್ರೀತಿಯ ಕ್ಷಮಾಪಣೆ ಎದ್ದು ಕಾಣುತ್ತಿತ್ತು.

**–ಟಾಮ್ ಬಾರ್ಲಿಂಗ್**

# ಸಭೆಯ ನಿಜವಾದ ಅರ್ಥ

ಹೊಸಒಡಂಬಡಿಕೆಯಲ್ಲಿ **"ಎಕ್‌ಲೇಸಿಯ"** ಎಂಬ ಗ್ರೀಕ್ ಶಬ್ದವು ನೂರು ಸಾರಿ ಕಾಣಿಸುತ್ತದೆ. ಸಾಧಾರಣವಾಗಿ ಇದನ್ನು 'ಸಭೆ' ಅಥವಾ "ಸಭೆಗಳು" ಎಂದು ಅನುವಾದಿಸಲ್ಪಟ್ಟಿರುತ್ತದೆ. ಈ ಶಬ್ಧವು ಎರಡು ಬೇರೆ ಬೇರೆ ಶಬ್ಧಗಳಿಂದ ಬಂದಿರುತ್ತದೆ; ಎಕ್(ಹೊರಗೆ) ಮತ್ತು ಕಲಿಯೊ(ಕರೆಯಲ್ಪಟ್ಟವರು). ಈ ಎರಡು ಶಬ್ಧಗಳು ಕೆಳಗಿನ ವಚನದಲ್ಲಿ ಪ್ರತ್ಯೇಕವಾಗಿ ಸಂಭವಿಸುತ್ತವೆ: "ನನ್ನ ಮಗನನ್ನು ಐಗುಪ್ತ ದೇಶದೊಳಗಿಂದ ಕರೆದನು" (ಮತ್ತಾಯ 2:15).



***ಎಕ್‌ಲೇಸಿಯ*** ಎಂದರೆ ಒಂದು ಸಮೂಹದ ಜನಾಂಗದವರು ಹೊರಗೆ ಕರೆಯಲ್ಪಟ್ಟವರು ಎಂದು ಅರ್ಥವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ನಂಬಿಕಸ್ತರೂ ಲೋಕದೊಳಗಿಂದ ಹೊರಗೆ ಕರೆಯಲ್ಪಟ್ಟು ದೇವಜನಾಂಗವಾಗುವಂತೆ ಈ ಶಬ್ಧವು ಕ್ರಿಸ್ತನಲ್ಲಿರುವ ವಿಶ್ವಾಸಿಗಳ ಕುರಿತಾಗಿ ಉಪಯೋಗಿಸಲ್ಪಟ್ಟಿರುತ್ತದೆ. ಆದರೆ ಇದು ಸಹ ಅಡವಿಯಲ್ಲಿದ್ದ ಇಸ್ರಾಯೇಲ್ಯರ ವಿಷಯದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ(ಅಪೋಸ್ತಲರ ಕೃತ್ಯಗಳು 7:38) ಮತ್ತು ಎಫೆಸದಲ್ಲಿರುವ ನಾಟಕಶಾಲೆಯೊಳಗೆ ಸೇರಲ್ಪಟ್ಟ ಅರ್ತೆಮೀದೇವಿ ಆರಾಧಕರ **"ಸಭೆ"** ಎಂದು ಉಪಯೋಗಿಸಲ್ಪಟ್ಟಿರುತ್ತದೆ( ಅ.ಕೃ. 19:32, 39, 41).

## ವಿಶೇಷವಾದ ಸಭೆಗಳು ಮತ್ತು ಸಾಮಾನ್ಯವಾದ ಸಭೆ

ಈ ಲೋಕವು "ಚರ್ಚ್"(ಸಭೆ) ಎಂಬ ಶಬ್ಧವನ್ನು ಉಪಯೋಗಿಸುವ ಹಾಗೆ ಕ್ರೈಸ್ತಸಹೋದರರು ಗೊಂದಲವನ್ನು ತಪ್ಪಿಸುವಂತೆ ಇವರು ಸಭೆ ಅಥವಾ ಎಕ್‌ಲೇಸಿಯಾ ಎಂದು ಉಪಯೋಗಿಸುತ್ತಾರೆ. ಆಥರೈಸ್ಡ್ ವರ್ಶನ್(ಎ.ವಿ)ನ ಆಂಗ್ಲ ಭಾಷಾಂತರದ ಹೊಸಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ಹಾಗೆ ಇಲ್ಲಿ ಚರ್ಚ್ ಎಂಬುದಕ್ಕೆ ಬದಲಾಗಿ ಎಕ್‌ಲೇಸಿಯಾ ಎಂದು ಉಪಯೋಗಿಸಿದ್ದಾರೆ.

1. ಯೆರೂಸಲೇಮಿನಲ್ಲಿದ್ದ ಸಭೆ (ಅ.ಕೃ. 8:1)
2. ಮನೆಯಲ್ಲಿ ಕೂಡುವ ಸಭೆ (ರೋಮಾಪುರದವರಿಗೆ 16:5)



3. ಲವೋದಕಿಯದವರ ಸಭೆ (ಕೊಲೊಸ್ಸೆಯವರಿಗೆ 4:16)
4. ಥೆಸಲೋನಿಕದವರ ಸಭೆ ( 1ಥೆಸಲೋನಿಕ 1:1)

***ಎಕ್‌ಲೇಸಿಯ*** ಎಂಬುದು ಇಡೀ ವಿಶ್ವಾಸಿಗಳ ಸಮುದಾಯಕ್ಕೆ ಸಂಬಂದಿಸಿರುತ್ತದೆ.

1. ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು (ಮತ್ತಾಯ 16:18)
2. ನಾನು ದೇವರ ಸಭೆಯನ್ನು ಹಿಂಸೆಪಡಿಸಿದ್ದೇನೆ (1ಕೊರಿಂಥ 15:9)
3. ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು (ಎಫೆಸ 5:3)

## ಸಭೆ ಮತ್ತು ವಾಗ್ದಾನಗಳು

ಇಬ್ರಿಯರಿಗೆ ಬರೆದ ಪತ್ರಿಕೆ 2:12 ರ ಭಾಗವನ್ನು ಕೀರ್ತನೆಗಳು 22:22ರಿಂದ ಉಲ್ಲೇಖಿಸಿ ಬರೆಯಲಾಗಿದೆ. ಗ್ರೀಕ್ ಭಾಷೆಯಲ್ಲಿ ಬಳಸಲ್ಪಟ್ಟ "ಎಕ್‌ಲೇಸಿಯ" ಇಬ್ರಿಯ ಭಾಷೆಯಲ್ಲಿ "ಖಹಲ್"(ಸಮುದಾಯ) ಎಂಬ ಶಬ್ಧದಿಂದ ಭಾಷಾಂತರಿಸಿದೆ. ಆದ್ದರಿಂದ "ಖಹಲ್" ಎಂಬ ಹಳೇಒಡಂಬಡಿಕೆಯ ಶಬ್ಧವು ಹೊಸಒಡಂಬಡಿಕೆಯ "ಎಕ್‌ಲೇಸಿಯ" ಆಗಿರುತ್ತದೆ. ಇದು ಪ್ರಥಮವಾಗಿ ಆದಿಕಾಂಡ 28ರಲ್ಲಿ "ಸಮೂಹ" ಎಂದು ಅನುವಾದಿಸಲ್ಪಟ್ಟಿರುತ್ತದೆ. ಸರ್ವಶಕ್ತನಾದ ದೇವರು ನಿನ್ನನ್ನು ಆಶೀರ್ವದಿಸಿ ನಿನಗೆ ಬಹಳ ಸಂತತಿಯನ್ನು ಕೊಟ್ಟು ನಿನ್ನಿಂದ ಅನೇಕ ಜನಾಂಗಗಳು ಹುಟ್ಟುವಂತೆ ಅನುಗ್ರಹಿಸಲಿ(ಆದಿ 28:3). ಹೀಗೆಯೇ ಅಬ್ರಹಾಮ್, ಇಸಾಕ್, ಮತ್ತು ಯಾಕೋಬರಿಗೆ ಮಾಡಲ್ಪಟ್ಟ ವಾಗ್ದಾನಗಳಲ್ಲಿ ಸಭೆಯ ಬೇರುಗಳಿರುತ್ತವೆ. ಬಳಿಕ ಆದಿಕಾಂಡ 28ರಲ್ಲಿ, ಯಾಕೊಬನು ನಾನು ಕಂಬವಾಗಿ ನಿಲ್ಲಿಸಿರುವ ಈ ಕಲ್ಲು ದೇವರ ಮನೆಯಾಗುವುದು(ವಚನ 22). ಪೌಲನು ತಿಮೋಥೆಯನಿಗೆ ಹೀಗೆ ಬರೆಯುತ್ತಾನೆ–"ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಬವೂ ಆಧಾರವೂ ಆಗಿದೆ"(1ತಿಮೋ 3:15).

## ಸಭೆ ಮತ್ತು ಕ್ರಿಸ್ತನು

ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು ಎಂದು ಬರೆದಿರುತ್ತದೆ(ಕೊಲೊಸ್ಸೆಯವರಿಗೆ 1:18). "ನೀವು(ಸಭೆ) ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ"(1ಕೊರಿಂಥದವರಿಗೆ 12:27). ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ವಿಭಿನ್ನವಾಗಿ ಕಾರ್ಯಮಾಡುತ್ತವೆಯೋ, ಅಂತೆಯೇ ಸಭೆಯು ಸಹೋದರ ಸಹೋದರಿಯರಿಂದ ಮಾಡಲ್ಪಟ್ಟಿರುತ್ತದೆ. ನಾನು ಕಣ್ಣಲ್ಲದ ಕಾರಣ ನಾನು ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವುದೋ! ದೇಹವೆಲ್ಲಾ ಕಣ್ಣಾದರೆ ಕಿವಿಯೆಲ್ಲಿ? ಅದೆಲ್ಲ ಕಿವಿಯಾದರೆ ಮೂಗೆಲ್ಲಿ? ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ(ವಚನಗಳು 17, 18). ಸಭೆಯ ಅಂಗಗಳಾಗಿರುವ ಸಹೋದರ ಹಾಗೂ ಸಹೋದರಿಯರಾದ ನಾವು ಎಲ್ಲಾ ಬೇಧಗಳನ್ನು ಮರೆಮಾಡಿ ಒಬ್ಬರನ್ನೊಬ್ಬರ ಹಿತವನ್ನು

ಚಿಂತಿಸುವವರಾಗಬೇಕು(ವಚನ25).

ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ ಎಂದು ಎಫೆಸದವರಿಗೆ 5:23ರಲ್ಲಿ ಬರೆದಿರುತ್ತದೆ. ಕ್ರಿಸ್ತನು ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದಿರಲಿ, ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು(ವಚನ 24). ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ(ವಚನ 26).

## ಸಭೆಯ ಜೀವನ

ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ, ಎಂಬ ಕ್ರಿಸ್ತನ ಅರ್ಪಣೆಯನ್ನು ನೆನಪಿಸಿಕೊಳ್ಳುವುದೇ ಸಭೆಯ ಜೀವನದ ಪ್ರಾಮುಖ್ಯವಾದ ಅಂಶವಾಗಿದೆ(ಅಪೋಸ್ತಲರ ಕೃತ್ಯಗಳು 20:7). “ನಾನು ಬಂದಾಗ ಹಣದ ವಸೂಲುಮಾಡಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನೂ ತನಗೆ ಬಂದ ಸಂಪಾದನೆಯ ಮೇರೆಗೆ ವಾರವಾರದ ಮೊದಲನೆಯ ದಿನದಲ್ಲಿ ಗಂಟುಮಾಡಿ ತನ್ನ ಮನೆಯಲ್ಲಿಟ್ಟುಕೊಂಡಿರಬೇಕು”(1ಕೊರಿಂಥ 16:2). ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ, ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ(ಇಬ್ರಿಯ 10:25).



ಹಳೇಒಡಂಬಡಿಕೆಯ ಮತ್ತೊಂದು ಇಬ್ರಿಯ ಶಬ್ದ ಎಕ್‍ಲೇಸಿಯಾ ಎಂಬ ಶಬ್ದಕ್ಕೆ ಸಮನಾಗಿರುವ ಶಬ್ದವೆಂದರೆ “ಮಿಕ್ರಾ”. ಆ ನನ್ನ ಮಗನನ್ನು ಐಗುಪ್ತದೇಶದಿಂದ ಕರೆದೆನು(ಹೋಶೆಯ 11:1). ಈ ಶಬ್ದವು ಎರಡು ಇಬ್ರಿಯ ಶಬ್ದಗಳಾದ “ಹೊರಗೆ“ ಮತ್ತು ‘‘ಕರೆಯಲ್ಪಟ್ಟ’’ರಿಂದ ಮಾಡಲಾಗಿದೆ. ಸ್ಟ್ರಾಂಗ್ ರವರ ಶಬ್ದಕೋಶವು ಇದನ್ನು “ಹೊರಗೆ ಕರೆಯಲ್ಪಟ್ಟ” ಎಂದು ವಿವರಿಸುತ್ತದೆ. ಇದನ್ನು “ಸಭೆಕೂಡಬೇಕು” ಎಂದು



ಅನುವಾದಿಸಲ್ಪಟ್ಟಿದೆ(ವಿಮೋಚನಾಕಾಂಡ 12:16). ಜೊತೆಗೆ ಸಂಘ(ಯೆಶಾಯ 1:13) ಎಂದೂ ಮತ್ತು ಪಾರಾಯಣ(ನೆಹೆಮೀಯ 8:8) ಎಂದು ಅನುವಾದಿಸಲ್ಪಟ್ಟಿರುತ್ತದೆ. ಸರ್ವ ಸಮೂಹ ಒಟ್ಟಾಗಿ ಕೂಡಿಬಂದು ಎಂದು ನೆಹೆಮೀಯ 8:8 ರಲ್ಲಿ ಉತ್ತಮವಾದ ಭಾಷಾಂತರವಿದೆ. ಸರ್ವಸಮೂಹದವರು ಒಟ್ಟಾಗಿ ಕೂಡಿಬರುವಾಗ ಸಭೆಯಾಗಿ ನಾವು ಏನನ್ನು ಮಾಡಬೇಕೆಂದು ನೆಹೆಮೀಯ 8ನೇ ಅಧ್ಯಾಯದಲ್ಲಿ ಉದಾಹರಣೆಯಾಗಿ ಕೊಡಲ್ಪಟ್ಟಿದೆ.

* ಎಲ್ಲರೂ ಒಂದಾಗಿ ಸೇರುವುದು (ವಚನ 1),
* ದೇವರ ವಾಕ್ಯಗಳನ್ನು ಓದುವುದು (ವ. 3),
* ಸತ್ಯದೇವರನ್ನು ಆರಾಧಿಸುವುದು (ವ. 6),
* ದೇವರ ವಾಕ್ಯಗಳನ್ನು ಗ್ರಹಿಸುವುದು (ವ. 7),
* ದೇವರ ವಾಕ್ಯಗಳನ್ನು ಸತ್ಯಕ್ಕೆ ತಕ್ಕಹಾಗೆ ಉಪದೇಶಿಸುವುದು (ವ. 9),
* ದೇವರ ವಾಕ್ಯಗಳನ್ನು ಗ್ರಹಿಸುವುದರ ಮುಖಾಂತರ ಸಂತೋಷ ಹೊಂದುವುದು (ವ. 12).

## ಇತರೆ ಅಂಶಗಳು

ಯಾವಾಗ ಸಭೆಯ ಒಬ್ಬ ವಿಶ್ವಾಸಿ ಅಕ್ರಮವಾಗಿ ನಡೆಯುತ್ತಾನೋ, ಅಂತವನಿಂದ ನಾವು ದೂರವಾಗಿರಬೇಕು: “ಸಹೋದರರೇ, ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ”(2ಥೆಸಲೋನಿಕ 3:16).




ಕರ್ತನಾದ ಯೇಸು ಏಳು ಸಭೆಗಳ ದೂತರಿಗೆ ಬರೆಸಿದ ಪತ್ರಿಕೆಗಳು ಮಾರ್ಗದರ್ಶನ ಮತ್ತು ಎಚ್ಚರಿಕೆಯಿಂದ ಕೂಡಿರುತ್ತವೆ. ಆ ಸಭೆಗಳಲ್ಲಿ ಆತ್ಮೀಕ ಆರೋಗ್ಯದಲ್ಲಿ ವ್ಯತ್ಯಾಸಗಳಿರುತ್ತವೆ. ಉದಾಹರಣೆಯಾಗಿ ಎಫೆಸದಲ್ಲಿರುವವರೆಲ್ಲರ ವಿಷಯದಲ್ಲಿ, “ನಿನ್ನ ಕೃತ್ಯಗಳನ್ನು ಪ್ರಯಾಸವನ್ನು ತಾಳ್ಮೆಯನ್ನು ಬಲ್ಲೆನು; ನೀನು ದುಷ್ಟರನ್ನು ಸಹಿಸಲಾರೆ; ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪುಹೊರಿಸಬೇಕಾಗುತ್ತದೆ”(ಪ್ರಕಟಣೆ 2:2–6). ಆದರೆ ಲವೋದಕಿಯದಲ್ಲಿರುವವರ ವಿಷಯದಲ್ಲಿ ಈ ರೀತಿ ಬರೆಯಲ್ಪಟ್ಟಿದೆ ಮತ್ತು ಆ ಸಭೆಯವರನ್ನು ಗದರಿಸಲಾಗಿದೆ, “ನೀನು ನಿನ್ನ ವಿಷಯದಲ್ಲಿ–ನಾನು ಐಶ್ವರ್ಯವಂತನು ಸಂಪನ್ನನು, ಒಂದರಲ್ಲಿಯೂ ಕೊರತೆಯಿಲ್ಲದವನು ಎಂದು ಹೇಳಿಕೊಳ್ಳುತ್ತೀ; ಆದರೆ ನೀನು ಕೇವಲ ದುರವಸ್ಥೆಯಲ್ಲಿ ಬಿದ್ದಿರುವಂತವನು, ದುರ್ಭಾಗ್ಯನೂ, ದರಿದ್ರನೂ, ಕುರುಡನು, ಬಟ್ಟೆಯಿಲ್ಲದವನು ಆಗಿರುವುದನ್ನು ತಿಳಿಯದೆ ಇದ್ದೀ”(ಪ್ರಕಟಣೆ 3:17).

# ಅನ್ಯೋನ್ಯತೆಯು ಅರ್ಥ ಮತ್ತು ಇದರ ಫಲಿತಾರ್ಥಗಳು



ಅಪೋಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ಪಂಚಾಶತ್ತಾಮ ದಿನದಂದು ಸುಮಾರು ಮೂರುಸಾವಿರ ಜನರು ದೀಕ್ಷಾಸ್ನಾನ ಹೊಂದಿದರು ಎಂದು ಬರೆಯಲ್ಪಟ್ಟಿದೆ. ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು(ವಚನ 42). ಸಹೋದರರೊಳಗೆ ಅನ್ಯೋನ್ಯತೆ ಎಂದು ಪ್ರಥಮ ಶತಮಾನದ ಸಭೆಯ ಪ್ರಾರಂಭದಿಂದ ಇದೆ, ಆದರೆ ಅದು ಏನಾಗಿತ್ತು? ''ರೂಢಿಯಲ್ಲಿರುವ'' ಎಂಬ ಈ ಪದವು ಮೂಲತಃ ಗ್ರೀಕ್ ಭಾಷೆಯಿಂದ ಬಂದಿರುತ್ತದೆ. ಆದ್ದರಿಂದ ಅನ್ಯೋನ್ಯತೆಯು ವಿಶ್ವಾಸಿಗಳು ಒಬ್ಬರಿಗೊಬ್ಬರು ಹಂಚಿಕೊಳ್ಳುವುದು ಮತ್ತು ರೂಢಿಯಲ್ಲಿರುವುದು ಎಂದು ಉಲ್ಲೇಖಿಸಲ್ಪಟ್ಟಿರುತ್ತದೆ.

ಆದರೆ ಸಹೋದರರ ನಡುವೆ ಯಾವುದು ರೂಢಿಯಲ್ಲಿದೆ? ಇದು ಅವರು ವಿಶ್ವಾಸ ಇಡುವ ಸಂಗತಿಗಳ ಕುರಿತು ಬರೆದಿದೆ. ಮೇಲಿನ ಹೇಳಿಕೆಯಲ್ಲಿ ಸಿದ್ದಾಂತವು ಅನ್ಯೋನ್ಯತೆಗಿಂತ ಮುಂದಾಗಿ ಬರುತ್ತದೆ. ವಿಶ್ವಾಸಿಗಳು ಒಪ್ಪಿಕೊಳ್ಳಲ್ಪಟ್ಟ ಸಿದ್ಧಾಂತಗಳ ಆಧಾರದ ಮೇಲೆ ಒಬ್ಬರನೊಬ್ಬರ ನಡುವೆ ಅನ್ಯೋನ್ಯತೆ ಇರುತ್ತದೆ. ಈ ಸಿದ್ದಾಂತಗಳು ಮುನುಷ್ಯರಿಂದ ಉಂಟುಮಾಡಲ್ಪಟ್ಟಿಲ್ಲ. ವಿಶ್ವಾಸಿಗಳನ್ನು ಐಕ್ಯತೆಗೊಳಿಸುವ ಅಪೋಸ್ತಲರ ಸಿದ್ದಾಂತಗಳಿಂದ ಕೂಡಿದ್ದು, ಪವಿತ್ರಶಕ್ತಿಯಿಂದ ಮತ್ತು ಯೇಸುಕ್ರಿಸ್ತನಿಂದ ಪ್ರಕಟವಾಗಿ ಅಪೋಸ್ತಲರಿಂದ ಬೋಧಿಸಲ್ಪಟ್ಟಿರುತ್ತದೆ.

**ದೇವರು ಮತ್ತು ಕ್ರಿಸ್ತನೊಂದಿಗೆ ಅನ್ಯೋನ್ಯತೆ :–**

ವಿಶ್ವಾಸಿಗಳು ದೇವರೊಂದಿಗೆ ಮತ್ತು ಕ್ರಿಸ್ತನೊಂದಿಗೆ ಇರುವ ಅನ್ಯೋನ್ಯತೆಯ ಕುರಿತಾಗಿ 1ಯೋಹಾನ 1ರಲ್ಲಿ ಅನ್ಯೋನ್ಯತೆಯ ಆಯಕಟ್ಟಿನ ಬಗ್ಗೆ ಸೇರಿಸಲ್ಪಟ್ಟಿರುತ್ತದೆ. ಯೇಸುಕ್ರಿಸ್ತನ ಕುರಿತು ಸತ್ಯವನ್ನು ದೃಢವಾಗಿ ಹೇಳುವಂತ ಸೇವೆಯನ್ನು ಹೊಂದಿರುವ ಅಪೋಸ್ತಲನಾದ ಯೋಹಾನನು ಈ ರೀತಿಯಾಗಿ ಉಲ್ಲೇಖಿಸುತ್ತಾನೆ; ''ನಾವು ಅದನ್ನು ಪ್ರಸಿದ್ಧಿಪಡಿಸುತ್ತೇವೆ, ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸುಕ್ರಿಸ್ತನ ಸಂಗಡಲೂ ಇರುವಂತದು''(ವಚನ3). ಒಬ್ಬ ವಿಶ್ವಾಸಿಗೆ ಇರುವಂತ ನಾಲ್ಕು ಬಗೆಯ



ಅನ್ಯೋನ್ಯತೆಯನ್ನು ಈ ಅಧ್ಯಾಯದಲ್ಲಿ ಚಿತ್ರಿಸಲ್ಪಟ್ಟಿದೆ.

1. ''ತಂದೆಯಾದ ದೇವರೊಂದಿಗೆ''
2. ''ಆತನ ಮಗನಾದ ಯೇಸುವಿನೊಂದಿಗೆ''
3. ''ಅಪೋಸ್ತಲರೊಂದಿಗೆ''
4. ''ಒಬ್ಬರನ್ನೊಬ್ಬರಿಗೆ''(ವಚನ 7).

ಅಪೋಸ್ತಲ ಬೋಧನೆಯ ಅಂಗೀಕಾರದಿಂದ ಅನ್ಯೋನ್ಯತೆಯು ಬಂದಿರುತ್ತದೆ. ಯಾರು ಬೋಧನೆಯನ್ನು ಅಂಗೀಕರಿಸುತ್ತಾರೋ ಅಂತವರು ಕ್ರಿಸ್ತನ ಮೂಲಕ ದೇವರೊಂದಿಗೆ ವಿಶೇಷ ಸಂಬಂಧದಲ್ಲಿ ಪ್ರವೇಶಿಸುವರು. ಇದನ್ನು ಮಾಡುವವರೆಲ್ಲರೂ ಒಬ್ಬರಿನ್ನೊಬ್ಬರಿಗೆ ಅನ್ಯೋನ್ಯತೆ ಹೊಂದಿರುವರು.

**ಅನ್ಯೋನ್ಯತೆಯೊಳಗೆ ಪ್ರವೇಶ :–**

ಈ ದಿನಗಳಲ್ಲಿ ಒಬ್ಬ ವ್ಯಕ್ತಿ ಅನ್ಯೋನ್ಯತೆಯನ್ನು ಹೇಗೆ ಹೊಂದುವನು? ಅಪೋಸ್ತಲರ ಅನ್ಯೋನ್ಯತೆಯಲ್ಲಿದ್ದವರು ಪಂಚಾಶತ್ತಮ ದಿನದಂದು ಪೇತ್ರನ ಬೋಧನೆಯನ್ನು ನಂಬಿ ಪಶ್ಚಾತ್ತಪಪಟ್ಟು ದೀಕ್ಷಾಸ್ನಾನ ಹೊಂದಿದವರಾಗಿದ್ದರು. ''ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ'' (ಕೊಲೊಸ್ಸೆ 2:13–14).

ಅನ್ಯೋನ್ಯತೆಯ ಕೇಂದ್ರದ ಆಲೋಚನೆಯು ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ ಕ್ರಿಸ್ತನೊಂದಿಗೆ ಇರುವ ಸಂಬಂಧವಾಗಿರುತ್ತದೆ. ಸತ್ಯವೇದದಲ್ಲಿ ಉದಾಹರಣೆಗಾಗಿ ವಿಭಿನ್ನವಾಗಿ ಕೊಡಲ್ಪಟ್ಟಿರುವ ವಿಶ್ವಾಸಿಗಳ ಹಾಗೂ ಕ್ರಿಸ್ತನ ನಡುವೆ ಒಂದು ಐಕ್ಯತೆಯನ್ನು ಕುರಿತು ಬರೆಯಲ್ಪಟ್ಟಿದೆ.



1. ನೀವು ಕ್ರಿಸ್ತನವಗಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ(ಗಲಾತ್ಯ 3:26–27).
2. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಆದ್ದರಿಂದ ಕ್ರಿಸ್ತನು ಮತ್ತು ವಿಶ್ವಾಸಿಗಳು ಒಟ್ಟಿಗೆ ಒಬ್ಬ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟಿರುತ್ತದೆ. (ಎಫೆಸ 1:22–23).
3. ಕ್ರಿಸ್ತನು ''ನಿಜವಾದ ದ್ರಾಕ್ಷೆಬಳ್ಳಿ'' ಮತ್ತು ವಿಶ್ವಾಸಿಗಳು ''ರೆಂಬೆಗಳು'' (ಯೋಹಾನ15:1–6).

**ಅನ್ಯೋನ್ಯತೆಯಲ್ಲಿ ಯಾವಾಗಲೂ ಇರಬೇಕು :–**

ಕ್ರಿಸ್ತನ ರಕ್ಷಣೆಯ ಕಾರ್ಯದಲ್ಲಿ ನಿರಂತರವಾಗಿ ದೀಕ್ಷಾಸ್ನಾನ ಹೊಂದಿರುವ ವಿಶ್ವಾಸಿಗಳು ರೊಟ್ಟಿ ಮುರಿಯುವದರಲ್ಲಿಯೂ ಭಾಗವಹಿಸಬೇಕು. ''ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದದಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು'' (ಅ.ಕೃ. 2:42–46).

ಅಪೋಸ್ತಲನಾದ ಪೌಲನು ಈ ರೀತಿ ಬರೆಯುತ್ತಾನೆ–''ನಾವು ದೇವಸ್ತೊತ್ರ ಮಾಡಿ



ಪಾತ್ರೆಯಲ್ಲಿ ಪಾನಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೆ(1ಕೊರಿಂಥ 10:16–17). "**ಕರ್ತನ ಭೋಜನ**" ಎಂದು ಅನುವಾದಿಸಲ್ಪಟ್ಟ ಶಬ್ದವು ಅನ್ಯೋನ್ಯತೆ ಎಂದು ಅನುವಾದಿಸಲ್ಪಟ್ಟಿದೆ. ರೊಟ್ಟಿಮುರಿಯುವ ಆರಾಧನೆಯಲ್ಲಿ ಭಾಗವಹಿಸುವದರಿಂದ ವಿಶ್ವಾಸಿಗಳು ಕ್ರಿಸ್ತನೊಂದಿಗೆ ಮತ್ತು ತಮ್ಮೊಳಗೆ ಅನ್ಯೋನ್ಯತೆಯನ್ನು ನವೀಕರಿಸಿಕೊಳ್ಳುವರು. ವಿಶ್ವಾಸಿಗಳು ತಮ್ಮ ದೀಕ್ಷಾಸ್ನಾನದಂದು ಕೇಳಲ್ಪಟ್ಟ ಅಪೋಸ್ತಲರ ಬೋಧನೆಯಲ್ಲಿ ಅನ್ಯೋನ್ಯತೆಯನ್ನು ಇಟ್ಟುಕೊಂಡು ಕ್ರಿಸ್ತನಲ್ಲಿರುವವರ ಮುಂದೆ ಸರಿಯಾಗಿ ನಡೆದುಕೊಳ್ಳುವರು. ಇವುಗಳನ್ನು ಸ್ಥಗಿತಗೊಳಿಸುವವರು ಅನ್ಯೋನ್ಯತೆಯಲ್ಲಿರುವುದಿಲ್ಲ. ನಾವು ದೇವರ ಸಂಗಡ "ಅನ್ಯೋನ್ಯತೆಯುಳ್ಳವರಾಗಿದ್ದೇವವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ" (1ಯೋಹಾನ 1:6). ಅಪೋಸ್ತಲರಿಂದ ಬೋಧಿಸಲ್ಪಟ್ಟ ನಿಜವಾದ ಸಿದ್ಧಾಂತಗಳನ್ನು ವಿಶ್ವಾಸಿಸಿ ಮತ್ತು ಅವುಗಳನ್ನು ಅನುಸರಿಸದೆ ಸತ್ಯವನ್ನು ಮಾಡುವುದು ಎಂದು ಅರ್ಥಕೊಡುತ್ತದೆ. ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ. ಕತ್ತಲೆಯಲ್ಲಿದ್ದದರಿಂದ ಪ್ರತೇಕವಾಗುವುದೇ ಅನ್ಯೋನ್ಯತೆಯಲ್ಲಿದ್ದೇವೆ ಎಂಬುದರ ಅರ್ಥ. 2ಕೊರಿಂಥದವರಿಗೆ 6:14–18ರಲ್ಲಿ ಪೌಲನು ದೀಕ್ಷಾಸ್ನಾನ ಹೊಂದಿದಂತ, ವಿಗ್ರಹಾರಾಧನೆಯಿಂದ ತಿರುಗಿ ಬಂದ ದೇವಜನರಿಗೆ ಪ್ರತ್ಯೇಕತೆಯ ಮೂಲತತ್ವಗಳನ್ನು ಈ ರೀತಿಯಾಗಿ ಬರೆಯುತ್ತಾನೆ– "ಬೆಳಕಿಗೂ ಕತ್ತಲೆಗೂ ಐಕ್ಯವೇನು?". "**ಕರ್ತನ ಭೋಜನ**"ದ ಆಚರಣೆ ಎಂದರೆ ಅನ್ಯೋನ್ಯತೆಯನ್ನು ಸೂಚಿಸುತ್ತದೆ.

**ಪ್ರಾಯೋಗಿಕವಾಗಿ ನಿಜವಾದ ಅನ್ಯೋನ್ಯತೆಯನ್ನು ಕಾಪಾಡುವುದು :–**

ನಿಜವಾದ ಅನ್ಯೋನ್ಯತೆಯನ್ನು ಕಾಪಾಡಲು ಕೆಲವೊಂದು ಪ್ರಾಯೋಗಿಕ ಮಾರ್ಗದರ್ಶನಗಳ ಅಗತ್ಯವಿದೆ. ಪ್ರಮುಖವಾದವುಗಳೆಂದರೆ:–

1. ಅಪೋಸ್ತಲರಿಂದ ಬೋಧಿಸಲ್ಪಟ್ಟ ನಿಜವಾದ ಸಿದ್ಧಾಂತಗಳನ್ನು ದೀಕ್ಷಾಸ್ನಾನ ಹೊಂದಲ್ಪಟ್ಟವರು ತಿಳಿದುಕೊಂಡಿರಬೇಕು ಮತ್ತು ನಂಬಿಕೆಯಿಡಬೇಕು(ನೀವು ಸ್ವೀಕರಿಸಿದ ಸುವಾರ್ತೆಗೆ ವಿರುದ್ಧವಾದದನ್ನು ಯಾವನಾದರೂ ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ ಎಂದು ಮೊದಲು ಹೇಳಿದ್ದಂತೆಯೇ ಈಗಲೂ ನಾನು ತಿರುಗಿ ಹೇಳುತ್ತೇನೆ–ಗಲಾತ್ಯ 1:9).

2. ನಿಜವಾದ ಅನ್ಯೋನ್ಯತೆಗೆ ಕೆಲವೊಂದು ಸಂಗತಿಗಳು ಒಪ್ಪಿಗೆಯಾಗುವುದಿಲ್ಲ.



ಉದಹರಣೆಗೆ ಸೈನಿಕದಳ ಸೇರಿ ಬೇರೆ ಜನರನ್ನು ಕೊಲ್ಲುವುದು ಅಥವಾ ಇತರರ ಕಡೆಗೆ ತಪ್ಪಾದ ವರ್ತನೆ.

3. ರೊಟ್ಟಿ ಮುರಿಯುವುದರಲ್ಲಿ ಆರಾಧನೆಯಲ್ಲಿ ಭಾಗವಹಿಸುವುದಕ್ಕಿಂತ ಮುಂಚೆ ಅವರು ದೀಕ್ಷಾಸ್ನಾನ ಹೊಂದಿರುವಂತಹ ವಿಶ್ವಾಸಿಗಳಾಗಿರಬೇಕು ಮತ್ತು ಈ ಮೇಲಿನ ತತ್ವಗಳನ್ನು ಸ್ವೀಕರಿಸುವವರಾಗಿರಬೇಕು.

4. ಸಭೆಯಲ್ಲಿ ರೊಟ್ಟಿಮುರಿಯುವ ಆರಾಧನೆಯಲ್ಲಿ ಯಾರು ತಮ್ಮ ತಪ್ಪು ನಂಬಿಕೆಗಳಿಂದ ಅಥವಾ ವರ್ತನೆಯಿಂದ ಬೆಳಕಿನಲ್ಲಿ ನಡೆಯುವುದನ್ನು ನಿಲ್ಲಿಸುವವರು ಅಂಥವರಿಗೆ ಈ ಕಾರ್ಯದಲ್ಲಿ ಭಾಗಿಯಾಗಲು ಅವಕಾಶ ಇರುವುದಿಲ್ಲ ( "ಆದರೆ ಕ್ರೈಸ್ತಸಹೋದರ ಎನಿಸಿಕೊಂಡವನು ಜಾರನಾದರೂ ಲೋಭಿಯಾದರೂ ವಿಗ್ರಹಾರಾಧಕನಾದರೂ ಬೈಯುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು ಎಂದು ಬರೆದಿದ್ದೆನು. ಹೊರಗಿನವರನ್ನು ತೀರ್ಪು ಮಾಡುವುದಕ್ಕೆ ನನಗೇನಧಿಕಾರ? ಒಳಗಿನವರನ್ನು ತೀರ್ಪುಮಾಡುವವರು ನೀವು ಅಲ್ಲವೇ? ಹೊರಗಿನವರನ್ನು ತೀರ್ಪು ಮಾಡುವವನು ದೇವರು, ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು" 1ಕೊರಿಂಥದವರಿಗೆ 5:11–13).

ನಿಜವಾದ ಅನ್ಯೋನ್ಯತೆಯನ್ನು ಕಾಪಾಡಲು ಈ ಮೇಲಿನ ಸಂಗತಿಗಳು ನಮ್ಮನ್ನು ಪ್ರಯತ್ನಪಡಿಸುತ್ತವೆ. ಆದರೆ ನಮ್ಮ ಬಲಹೀನತೆಯ ನಿಮಿತ್ತ ಅವುಗಳು ನಮ್ಮಲ್ಲಿ ಪರಿಪೂರ್ಣವಾಗಿ ಯಾವಾಗಲೂ ಕಾರ್ಯಗತವಾಗುವುದಿಲ್ಲ.

**ಅನ್ಯೋನ್ಯತೆಯ ಜವಾಬ್ದಾರಿಗಳು :–**

ಪಪಂಚದ ಎಲ್ಲಾ ವಿಶ್ವಾಸಿಗಳನ್ನು, ವರ್ಗದವರನ್ನು, ಬೇರೆ ಧರ್ಮದವರನ್ನು ಮತ್ತು ಗಂಡುಹೆಣ್ಣನ್ನು ಐಕ್ಯಗೊಳಿಸುವ ಸಹೋದರ ಮತ್ತು ಸಹೋದರಿಯರ ನಡುವೆ ಇರತಕ್ಕಂತ ಈ ಅನ್ಯೋನ್ಯತೆ ನಿಜಕ್ಕೂ ಅದ್ಭುತವಾದ ಸಂಗತಿ. ಒಬ್ಬರನ್ನೊಬ್ಬರ ನಡುವೆ ಇರುವ ಐಕ್ಯತೆ ವಿಶ್ವಾಸಿಗಳ ವಿಶೇಷವಾದ ಸಂಬಂಧ ಅನೇಕ ಜವಾಬ್ದಾರಿಗಳನ್ನು ತರುತ್ತದೆ. ಅನ್ಯೋನ್ಯತೆ ಎಂದು ಭಾಷಾಂತರಿಸಲ್ಪಟ್ಟ ಈ ಗ್ರೀಕ್ ಶಬ್ದವು ಈ ಶಬ್ದದ ಜೊತೆಗೆ ಹೊಂದಾಣಿಕೆಯಾಗಿರುವ ಶಬ್ದಗಳು ಇತರ ರೀತಿಯಲ್ಲಿ ಬಾಷಾಂತರಿಸಲ್ಪಟ್ಟು, ಅನೇಕ ಜವಾಬ್ದಾರಿಗಳನ್ನು ನಮಗೆ ಈ ಕೆಳಗೆ ಉದಾಹರಣೆಗಳಾಗಿ ಕೊಡಲ್ಪಟ್ಟಿರುತ್ತವೆ.

1. ನೀವು(ಫಿಲಿಪ್ಪಿಯವರ ಸಭೆ) ನನ್ನ ಸಂಕಟದಲ್ಲಿ ಪಾಲುಗಾರರಾಗಿದ್ದದು ಒಳ್ಳೆಯದಾಯಿತು (ಫಿಲಿಪ್ಪಿ 4:14).

2. ಇದಲ್ಲದೆ ಪರೋಪಕಾರವನ್ನೂ ಧರ್ಮ ಮಾಡುವುದನ್ನೂ ಮರೆಯಬೇಡಿರಿ. ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು (ಇಬ್ರಿಯರಿಗೆ 13:16).

3. ದೇವಜನರಿಗೆ ಕೊರತೆ ಬಂದಾಗ ಸಹಾಯ ಮಾಡಿರಿ, ಅತಿಥಿ ಸತ್ಕಾರವನ್ನು ಅಭ್ಯಾಸಿಸಿರಿ (ರೋಮಾಪುರದವರಿಗೆ 12:13).

4. ....ನೀವು(ಕೊರಿಂಥ ಸಭೆ) ಉದಾರವಾಗಿ ಸಹಾಯ ಮಾಡಿದ್ದರಿಂದಲೂ (ಯೆರೂಸಲೇಮಿನ ಸಭೆಯವರಿಗೆ) ದೇವರನ್ನು ಕೊಂಡಾಡುವರು (2ಕೊರಿಂಥ 9:13).

“ಸುಮ್ಮನೆ ನಿಂತು ದೇವರ ಅದ್ಭುತ ಕಾರ್ಯಗಳನ್ನು ಧ್ಯಾನಿಸು”






# ಪ್ರೀತಿಯ ಬಂಧನಗಳು

## (ಲಘು ಧ್ಯಾನ)

“ಮದಲಗಿತ್ತಿಯುಳ್ಳವನೇ(ಮದುವೆಯ ಹೆಣ್ಣು) ಮದಲಿಂಗನು; ಆದರೂ ಮದಲಿಂಗನ ಗೆಳೆಯನು ಅವನ ಹತ್ತಿರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಬಹುಸಂತೋಷ ಪಡುತ್ತಾನಲ್ಲವೇ, ಇದರಂತೆ ನನಗಿರುವ ಸಂತೋಷ; ಅದು ನೆರವೇರಿತು”.

ಸ್ನಾನಿಕನಾದ ಯೋಹಾನನ ಈ ಮಾತುಗಳು ಇಂದಿಗೂ ಸಹ ಅನ್ವಯವಾಗುತ್ತವೆ. ಯೇಸುಕ್ರಿಸ್ತನನ್ನು ನೋಡಿ ಹಾಗೂ ಕೇಳಿದ ಅನುಭವದ ಆ ಆನಂದವು ಖಂಡಿತವಾಗಿಯೂ ಸತ್ಯವಾಗಿ ಯೋಹಾನನದಾಗಿದೆ. ಸಾಮಾನ್ಯ ಸತ್ಯವನ್ನು ಒಂದು ವಿಶೇಷ ಸಂದರ್ಭಕ್ಕಾಗಿ



ಯೋಹಾನನು ಅನ್ವಯಿಸುತ್ತಾನೆ. ಇಪ್ಪತ್ತನೆಯ ಶತಮಾನದ ಈ ದಿನಗಳಲ್ಲಿ ಸಹ ಕಾಯುತ್ತಾ ನಾವು ಆ ಸುವಾರ್ತೆಯನ್ನೇ ಅನ್ವಯಿಸುವವರಾಗಿದ್ದೇವೆ. ಹೇಗಂದರೆ ಪರಲೋಕದಿಂದ ತನ್ನ ನಂಬಿಕಸ್ತಳಾದ ವಧುವನ್ನು ಪಡೆಯಲು ಬರುವ ಕ್ರಿಸ್ತನ ಆಗಮನವನ್ನು ನಾವು ನಿರೀಕ್ಷಿಸುವುದು ಸಮಂಜಸವಾದದ್ದೇ. ಏಕಂದರೆ ಕ್ರಿಸ್ತನೊಂದಿಗೆ ಮದುವೆ ಆಗಲಿದೆ. ಈ ಅನುಭವವನ್ನು ನಾವು ಇತ್ತೀಚೆಗೆ ಹೊಂದಿ ಯೋಹಾನನು ಹೇಳಿದ ಆ ಆನಂದವನ್ನು ಅನುಭವಿಸಿದೆವು.

ಕ್ರಿಸ್ತನಲ್ಲಿರುವ ವಧುವನ್ನು ನಮ್ಮ ಮಗನು ಮದುವೆ ಆಗುವುದನ್ನು ವೀಕ್ಷಿಸಲು ಅವರ ಧ್ವನಿಗಳನ್ನು ಕೇಳಿಸಿಕೊಳ್ಳಲು ಪಶ್ಚಿಮ ಕೆನಡಾ ದೇಶಕ್ಕೆ ಪ್ರಯಾಣಿಸುವುದು ನಮ್ಮ ಅತೀ ಸಂತೋಷದ ಅನುಭವಾಗಿತ್ತು. ಕ್ರಿಸ್ತನ ರಾಜ್ಯದೆಡೆಗೆ ನಡೆವ ಕೈ–ಕೈ ಹಿಡಿದುಕೊಂಡು ಕ್ರಿಸ್ತನನ್ನು ಪ್ರೀತಿಸಿ ಸಾಗುವ ಇಬ್ಬರನ್ನೂ ನೋಡುವುದು ನಿಜವಾಗಿ ಸಂತೋಷದ ಸಂಗತಿ ಆಗಿರುತ್ತದೆ.

ಮದುವೆಯಾದ ಈ ಇಬ್ಬರು ಯೌವ್ವನಸ್ಥರು ಮೊದಲು ಗೊತ್ತಿರದ ಎರಡು ಕುಟುಂಬಗಳನ್ನು ಒಂದು ಮಾಡಿರುವರು. ಈಗ ಈ ಎರಡು ಕುಟುಂಬಗಳಲ್ಲಿ ಬಲವಾದ ಸಂಬಂಧವೇರ್ಪಟ್ಟಿದೆ, ಮೊದಲು ಭೇಟಿ ಆಗಿರಲೇ ಇಲ್ಲ, ಈ ಮದುವೆಯ ಮೂಲಕ ಮೊದಲು ಭೇಟಿ ಮಾಡದೆ ಇದ್ದವರು ಈಗ ಪ್ರೀತಿಯಲ್ಲಿ ಒಂದಾಗಿದ್ದಾರೆ.

ಮದುವೆಯಾದ ಯೌವ್ವನಸ್ಥರು ಕೇಂದ್ರಬಿಂದು ಆಗಿದ್ದರೂ, ಅವರ ಪ್ರೀತಿ ಹರಡಿ ಇತರರನ್ನೂ ಪ್ರೀತಿಯಲ್ಲಿ ಒಗ್ಗೂಡಿಸಿದೆ. ಏಕಂದರೆ, ನಮ್ಮ ಮಕ್ಕಳೊಂದಿಗಿನ ಪ್ರೀತಿ ಹಾಗೂ ಅವರು ಪ್ರೀತಿಸುವವರನ್ನು ಸಹ ನಾವು ಪ್ರೀತಿಸುವವರಾಗುತ್ತೇವೆ.



ಕ್ರಿಸ್ತನ ಪ್ರೀತಿಯು ಇದೇ ವಿಧವಾಗಿದೆ ಅಲ್ಲವೇ? ನಾವು ಆತನವರಾದ ಮೇಲೆ ಆತನನ್ನು ಪ್ರೀತಿಸುವವರನ್ನು ಸಹ ನಾವು ಪ್ರೀತಿಸುತ್ತೇವೆ. ಈ ಸಾಮಾನ್ಯ ಪ್ರೀತಿಯ ಬಂಧನ ಇರುವುದರಿಂದಲೇ ಹೀಗೆ ಆಗುತ್ತದೆ. ಅದಿಲ್ಲದಿದ್ದರೆ ಹೀಗೆ ಸಾಧ್ಯವಾಗುತ್ತಿರಲಿಲ್ಲ. ಇತರ ಸಹೋದರ ಸಹೋದರಿಯರೊಂದಿಗೆ ಪ್ರೀತಿಯ ಅನ್ಯೋನ್ಯತೆ ಉಂಟಾಗುತ್ತದೆ. ಏಕಂದರೆ ನಾವೆಲ್ಲರೂ ಅದೇ ಕರ್ತನನ್ನು ಪ್ರೀತಿಸುತ್ತೇವೆ. ಇಡೀ ಪ್ರಪಂಚದಲ್ಲಿಯೇ ಅತೀ ಅಮೂಲ್ಯವಾದ ವಿಷಯವೆಂದರೆ ನಾವು ಕ್ರಿಸ್ತನನ್ನು ಪ್ರೀತಿಸಿ ಭಕ್ತಿಯಿಂದ ಇರುವುದೇ ಆಗಿದೆ.

ನಾವು ನಮ್ಮ ಸೊಸೆಯ ಕುಟುಂಬದವರನ್ನು ಪ್ರೀತಿಸಿದಂತೆಯೇ ಕ್ರಿಸ್ತನಲ್ಲಿರುವ ಇತರರನ್ನು ಸಹ ಪ್ರೀತಿಸುತ್ತೇವೆ. ನಾವು ಕ್ರಿಸ್ತನಿಗೆ ಸೇರಿದವರಾಗಿದ್ದರೆ, ನಾವು ಅಬ್ರಹಾಮನ ಕುಟುಂಬಸ್ಥರೂ ಆತನಿಗೆ ದೇವರಿಂದ ಉಂಟಾದ ಎಲ್ಲಾ ವಾಗ್ದಾನಗಳಿಗೂ ಬಾಧ್ಯಸ್ಥರಾಗುತ್ತೇವೆ.

ಇಲ್ಲಿಯವರೆಗೆ ಗೊತ್ತಿರದ ಅನೇಕ ಸಂಬಂಧಿಕರನ್ನು ನಾವು ಆತ್ಮೀಕವಾಗಿ ಕ್ರಿಸ್ತನ ಮೂಲಕ ಕಂಡುಕೊಳ್ಳುತ್ತೇವೆ. ನಮ್ಮ ಕುಟುಂಬದ ಕ್ರಿಸ್ತನಲ್ಲಿರುವ ಹಲವರನ್ನು ನಾವು ಈಗ ಮುಖಾಮುಖಿಯಾಗಿ ಭೇಟಿ ಆಗದಿದ್ದರೂ ಕುರಿಮರಿಯ ಮದುವೆಯ ಸಮಾರಂಭದಲ್ಲಿ ಕ್ರಿಸ್ತನ ಬರೋಣದಲ್ಲಿ ಭೇಟಿ ಆಗಲಿದ್ದೇವೆ.

ಈ ಜೀವಿತದಲ್ಲಿ ಕ್ರಿಸ್ತನೊಂದಿಗಿನ ಅನ್ಯೋನ್ಯತೆ ಎಷ್ಟೋ ಸಂತೋಷಕರವಾಗಿದೆ. ಆದರೂ ಹೆಚ್ಚಿನ ಸಂತೋಷದ ಸಮಯಗಳು ಮುಂದೆ ನಮಗಾಗಿ ಇಡಲ್ಪಟ್ಟಿದೆ! ಈಗ ಪ್ರೀತಿಯ ಕುಟುಂಬ ಬಂಧನದ ಆನಂದವನ್ನು ಅನುಭವಿಸುತ್ತೇವೆ, ಆದರೂ ಮುಂದಿನ ಮಹಿಮೆಯ ಮದುವೆಯ ಸಮಯದಲ್ಲುಂಟಾಗುವ ಮಹಾ ಆನಂದವನ್ನು ಈಗಿರುವ ಸಂತೋಷಕ್ಕೆ ಸಾಟಿ ಮಾಡಲಾಗದು.

ಈಗ ನಾವು ನಿಶ್ಚಿತಾರ್ಥದ ಸಂಬಂಧದ ಅವಧಿಯಲ್ಲಿದ್ದೇವೆ. ಈ ಅವಧಿ ಹೆಚ್ಚು ಅಥವಾ ಕಡಿಮೆ ಆಗಿರಬಹುದು. ಮದುವೆಯ ದಿನಾಂಕ ನಮಗೆ ಗೊತ್ತಿಲ್ಲ. ಈಗ ನಾವು ಕ್ರಿಸ್ತನ(ಮದಲಿಂಗ) ಬರೋಣಕ್ಕಾಗಿ ಕಾಯುವುದು ಕಡ್ಡಾಯವಾಗಿದೆ. ನಾವು ಕಾದಿರುವಾಗ ನಂಬಿಕಸ್ತರಾಗಿ ಇರುವುದನ್ನು ನೋಡಿದರೆ ಮಾತ್ರ ಆತನು ನಮ್ಮನ್ನು ಸ್ವೀಕರಿಸುತ್ತಾನೆ.

ಕಾದಿರುವಾಗ ನಾವು ಸಂತೋಷ ಹಾಗೂ ನಂಬಿಗಸ್ತರಾಗಿರೋಣ. ಪ್ರವಾದಿ ಯೆಶಾಯನು ಹೇಳಿದಂತೆ–"ಕರ್ತನಲ್ಲಿ ನಾವು ಅತ್ಯಾನಂದ ಪಡುತ್ತೇನೆ, ದೇವರಲ್ಲಿ ನನ್ನ ಆತ್ಮವು ಹರ್ಷಿಸುತ್ತದೆ; ಏಕಂದರೆ, ರಕ್ಷಣಾವಸ್ತ್ರದಿಂದ ಆತನು ನನ್ನನ್ನು ಹೊದಿಸಿದ್ದಾನೆ, ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದಾನಲ್ಲಾ, ವರನು ಮದುವೆಯ ಧಿರಿಸನ್ನು ಅಥವಾ ಬಟ್ಟೆಯನ್ನು ಧರಿಸುವಂತೆಯೂ ವಧುವು ತನ್ನನ್ನು ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಮಾಡಿದ್ದಾನೆ".

• • • • • • • • • • • •



# ಮೊದಲನೇ ಶತಮಾನದ ಕ್ರೈಸ್ತತ್ವ

ಮೊದಲನೇ ಶತಮಾನದ ಕ್ರೈಸ್ತತ್ವದಲ್ಲಿ ದೇವರ ರಾಜ್ಯವು ಒಂದು ಪ್ರಧಾನ ವಿಷಯವಾಗಿತ್ತು. ಯೇಸು ಇದರ ಕುರಿತು ಸತತವಾಗಿ ಹೇಳಿದನು ಮತ್ತು ಆತನ ಅನೇಕ ಸಾಮ್ಯಗಳು "**ದೇವರರಾಜ್ಯವು......**" ಎಂಬುದಾಗಿಯೇ ಪ್ರಾರಂಭವಾಗಿವೆ.

ಯೇಸು ಪರಲೋಕಕ್ಕೆ ಏರಿ ಹೋಗುವ ಮುನ್ನ ತನ್ನ ಶಿಷ್ಯರಾದ ಅಪೋಸ್ತಲರಿಂದ ಕೇಳಲ್ಪಟ್ಟ ಕೊನೆಯ ಪ್ರಶ್ನೆಯು ಈ ವಿಷಯದ ಕುರಿತೇ ಆಗಿದೆ. ಯೇಸು ತಾನು ಪರಲೋಕಕ್ಕೆ ಏರಿಹೋಗುವ ಮುನ್ನ ಹೆಚ್ಚು ಕಡಿಮೆ ಆರು ವಾರಗಳು ಅವರಿಗೆ "ದೇವರ ರಾಜ್ಯದ ವಿಷಯಗಳನ್ನು" ಕಲಿಸಿಕೊಡುತ್ತಾ ಕಳೆದನು(ಅಪೋಸ್ತಲರ ಕೃತ್ಯಗಳು 1:3).

ಅವರು ಯೇಸುವಿನೊಂದಿಗೆ ಬೆಥಾನ್ಯದ ದಾರಿಯಲ್ಲಿ ನಡಕೊಂಡು ಹೋಗುವಾಗ ಅವರು ಆತನನ್ನು ಕೇಳಿದ ಪ್ರಶ್ನೆಯ ಸ್ವಭಾವದಲ್ಲಿಯೇ ಆತನ ಉಪದೇಶವು ಒಳಗೊಂಡಿದ್ದ ವಿಷಯಗಳೇನೆಂಬದನ್ನು ನಾವು ಕಾಣಬಹುದು. ಅವರು ಕೇಳಿದರು–"ಕರ್ತನೇ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ಯರಿಗೆ ತಿರುಗಿ ರಾಜ್ಯವನ್ನು ಸ್ಥಾಪಿಸಿಕೊಡುವಿಯೋ?" (ಅಪೋಸ್ತಲರಕೃತ್ಯಗಳು 1:6). ಸಾಕ್ಷ್ಯವಾಗಿ ಯೇಸು ಅವರಿಗೆ ವಿವರಿಸಿ ಹೇಳುವಾಗ– ಹಳೆಯ ಒಡಂಬಡಿಕೆಯು ಮರಣ ಮತ್ತು ಪುನರುತ್ಥಾನ ಇವುಗಳನ್ನು ಮುಂತಿಳಿಸಿರುವದು (1ಕೊರಿಂಥ 15:3–4 ವಾಕ್ಯಗಳನ್ನು ನೋಡಿ) ಮಾತ್ರವಲ್ಲದೆ ದೇವರ ರಾಜ್ಯವು ಇಸ್ರಾಯೇಲಿನಲ್ಲಿ ಪುನಸ್ಥಾಪಿತವಾಗುವಾಗ ತಾನು ಭೂಮಿಯನ್ನು ಆಳಲು ರಾಜನಾಗಿ ಬರುವುದನ್ನು ಸಹ ಮುಂತಿಳಿಸಿದೆ ಎಂಬುದನ್ನು ಹೇಳಿದನು.

ಯೇಸುವಿನ ಉತ್ತರವು ಅವರ ಪ್ರಶ್ನೆಗೆ ಅದನ್ನು ಇನ್ನೂ ಸ್ಪಷ್ಟವಾಗಿ ಹೇಳಿದೆ: ಅವರ ತಪ್ಪಾದ ತಿಳುವಳಿಕೆಗೆ ಯೇಸು ಅವರನ್ನು ಗದರಿಸಲಿಲ್ಲ, ಆದರೆ ಆತನ ಬರೋಣ ಮತ್ತು ಆತನ ರಾಜ್ಯದ ವಿಷಯವನ್ನು ನಿರ್ಧರಿಸುವಂಥದ್ದು ದೇವರೊಬ್ಬನೇ ಎಂಬುದಾಗಿ ಹೇಳಿದನು (ಅಪೋಸ್ತಲರ ಕೃತ್ಯಗಳು 1:7) ಮತ್ತು ಇದರ ಮಧ್ಯೆ ಅವರಿಗೆ ದೇವರ ರಾಜ್ಯದ ಸುವಾರ್ತೆಯನ್ನು ಸಾರುವ ಕೆಲಸ ಸಿಕ್ಕಿತು.

**ಇಸ್ರಾಯೇಲ್ಯರ ನಿರೀಕ್ಷೆ :–**

ಆ ಪುರಾತನ ನಿರೀಕ್ಷೆ–ಯೆರೂಸಲೇಮು ಕರ್ತನ ಸಿಂಹಾಸನವಾಗುತ್ತದೆ ಮತ್ತು ದೇವರ ಜನರಾದ ಇಸ್ರಾಯೇಲ್ಯರು ಆತನ ಮೆಚ್ಚುಗೆಗೆ ಹಿಂದಿರುಗುವರು. ಇದು ರಕ್ಷಣೆಯ ಸುವಾರ್ತೆಯ ಪ್ರಧಾನ ಅಂಶ(ಅ.ಕೃ. 26:7, 28:20 ಮತ್ತು ರೋಮಾ 11ನೇ ಅಧ್ಯಾಯದ ವಾಕ್ಯಗಳನ್ನು ನೋಡಿ).

ಸಂಪೂರ್ಣವಾಗಿ ನಾಶನದಿಂದ ತಪ್ಪಿಸಿಕೊಳ್ಳುವಂತೆ ದೇವರಿಂದ ರಕ್ಷಿಸಲ್ಪಟ್ಟ ಜನರಿಗೆ ಈ ಲೋಕವನ್ನು ಶಾಶ್ವತವಾಗಿ ವಾಸಿಸಲು ಯೋಗ್ಯವಾದ ಸ್ಥಳವಾಗಿ ಮಾರ್ಪಡಿಸಲು ಯೆರೂಸಲೇಮಿಗೆ ರಾಜನು ಹಿಂತಿರುಗುವ ಸಂಗತಿಯೇ ಪ್ರಧಾನವಾದ ಸಂಗತಿಯಾಗಿದೆ. ಈಗ ವಿಗ್ರಹಾರಾಧನೆ ಮತ್ತು ಕಲ್ಪನಾಕಥೆಗಳು ಹಾಗೂ ಕುಟಿಲ ಉಪಾಯಗಳು ಬಹಳ ಜನ ನಂಬಿರುವ ನಿಜವಾದ ಕ್ರೈಸ್ತತ್ವದೊಂದಿಗೆ ಕೆಟ್ಟದಾಗಿ ಮಿಶ್ರವಾಗಿವೆ ಮತ್ತು ಇದರಿಂದ ನಿಜವಾದ ಕ್ರೈಸ್ತ

ನಿರೀಕ್ಷೆಯ ಬಗ್ಗೆ ಗೊಂದಲ ಉಂಟುಮಾಡಿವೆ. ಜನರು, ಮನುಷ್ಯನ ಶಾಶ್ವತ ಇರುವಿಕೆಯ ವಿಷಯವನ್ನು ಮತ್ತು ಅವನ ಮುಂದಿನ ನೆಲೆಯ ವಿಷಯವನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದು ದೇವರ ನಿಜ ವಾಗ್ದಾನಗಳನ್ನು ಬಹಳ ಕ್ಷುಲ್ಲಕವಾಗಿ ಎಣಿಸಿದ್ದಾರೆ. ಆದರೆ ಅದು ಯೇಸುವಿನೊಂದಿಗೆ ಇಲ್ಲ.

* ಆತನು ಕಲಿಸಿದ್ದು–''ಪಾಪ ಮತ್ತು ಮರಣ ಈ ಎರಡೂ ಬಹು ಘೋರವಾದ ಸ್ಥಿತಿಗಳಾಗಿದ್ದು ಇವುಗಳನ್ನು ಬಿಟ್ಟರೆ ಇವು ನಮ್ಮ ಇರುವಿಕೆಯನ್ನು ಸಂಪೂರ್ಣವಾಗಿ ನಾಶ ಮಾಡಬಲ್ಲವು''(ಲೂಕ 13:1–5, ಯೋಹಾನ 3:15–16).

* ಆತನ ರಕ್ಷಣೆಯ ತ್ಯಾಗವು–ನಮ್ರತೆಯುಳ್ಳವರು''ಭೂಮಿಯನ್ನು'' ಸ್ವಾಸ್ಥ್ಯವಾಗಿ ಹೊಂದುವರು(ಮತ್ತಾಯ 5:5) ಮತ್ತು ಯೆರೂಸಲೇಮು ''ರಾಜಾಧಿರಾಜನ ಪಟ್ಟಣ'' ಆಗುತ್ತದೆ ಎಂಬ ಸಂಗತಿಗಳನ್ನು ಒಳಗೊಂಡಿದೆ.

**ಪುನರುತ್ಥಾನದ ನಿರೀಕ್ಷೆ :–**

ಮೊದಲು ಅಂಕೆಗೆ ಬಂದು ನಂತರ ಮಹಿಮೆಯನ್ನು ಹೊಂದಿಕೊಳ್ಳಬೇಕಾಗಿರುವ ಜಗತ್ತನ್ನು ಯೇಸು ಇಸ್ರಾಯೇಲಿನಿಂದ ರಾಜನಾಗಿ ಆಳುವಾಗ ಭೂಮಿಯು ಪುನಶ್ಚೇತನಗೊಂಡು ಅದು ಜೀವಕಳೆ ಹೊಂದಿಕೊಳ್ಳಲಿದೆ. ಆತನ ಬರೋಣದ ಮುಂಚಿನ ಸಂಕಷ್ಟಗಳ ದಿನಗಳ ಅಘಾತಗಳನ್ನು ತಾಳಿಕೊಳ್ಳುವ ಮನುಷ್ಯರಿಗೆ ಸಮಾಧಾನದಿಂದಲೂ ಐಕ್ಯತೆಯಿಂದಲೂ ಬಾಳಲು ಅನುಮತಿ ನೀಡಲಾಗುತ್ತದೆ. ಬಂಜರು ಪ್ರದೇಶಗಳನ್ನು ಫಲವತ್ತಾದ ಪ್ರದೇಶಗಳನ್ನಾಗಿ ಮಾಡಲಾಗುತ್ತದೆ; ಅನ್ಯಾಯವನ್ನು ಸರಿಗೊಳಿಸಲಾಗುತ್ತದೆ. ದಬ್ಬಾಳಿಕೆ ನಡೆಸುವವರು ನಾಶವಾಗುತ್ತಾರೆ; ನಿಜವಾದ ಧರ್ಮವು ಮೊದಲ ಸ್ಥಿತಿಗೆ ಬರುತ್ತದೆ–ಇದು, ಯೆರೂಸಲೇಮಿನಲ್ಲಿ ಮತ್ತೊಮ್ಮೆ ಪ್ರಾರಂಭವಾಗಲಿರುವ ಆರಾಧನೆಯನ್ನು ಒಳಗೊಂಡಿದೆ. ಯೇಸು ರಾಜನಾಗಿ ಹಿಂತಿರುಗಿ ಬರುವ ಮುನ್ನ ಯಾರ್ಯಾರು ಆತನನ್ನು ನಿಜವಾಗಿ ಹಿಂಬಾಲಿಸಿರುತ್ತಾರೋ, ಅವರಿಗೆ ನಿತ್ಯಜೀವ ದೊರೆಯುತ್ತದೆ ಮತ್ತು ಅವರು ಹೊಸದಾಗಿ ಸ್ಥಾಪಿಸಲ್ಪಡುವ ರಾಜ್ಯಕ್ಕಾಗಿ ಕೆಲಸ ಮಾಡುವವರೂ ಸಹಾಯ ಮಾಡುವವರೂ ಆಗುವರು. ಇವರ ಬಲ ಮತ್ತು ನಿಯಂತ್ರಣ ಕ್ರಮೇಣ ಹೆಚ್ಚುತ್ತಾ ಭೂಮಿಯೆಲ್ಲಾ ಹರಡಿಕೊಳ್ಳುತ್ತದೆ. ಕೊನೆಯಲ್ಲಿ ಈ ವಾಕ್ಯವು ನೆರವೇರುತ್ತದೆ–''ಇಡೀ ಭೂಮಂಡಲವು ಯೆಹೋವನ ಮಹಿಮೆಯಿಂದ ತುಂಬಿರಲಿ'' (ಅರಣ್ಯಕಾಂಡ 14:21, ಕೀರ್ತನೆ 72:19 ಹಾಗೂ ಹಬಕ್ಕೂಕ 2:14 ನೋಡಿ).

**ಇದು ಹೇಗೆ ಸಾಧಿಸಲ್ಪಡುತ್ತದೆ?**

ಸತ್ಯವೇದವು ಹೇಳುತ್ತದೆ–ಕರ್ತನಾದ ಯೇಸು ಮತ್ತು ಆತನ ಮತ್ತು ಆತನ ಕೆಲವು ದೂತರು ಪರಲೋಕದಿಂದ ಇಳಿದು ಬರುವುದರಿಂದಲೇ ಆಗುತ್ತದೆ. ಮರಣಹೊಂದಿ ಅರಿವಿಲ್ಲದೆ ಇರುವವರು ಅಂದರೆ ಈಗ ''ಭೂಮಿಯ ಧೂಳಿನಲ್ಲಿ ದೀರ್ಘನಿದ್ರೆ ಮಾಡುತ್ತಿರುವವರು'' (ದಾನಿಯೇಲ 12:2) ತಮ್ಮ ನಿದ್ರೆಯಿಂದ ಎಬ್ಬಿಸಲ್ಪಟ್ಟು ಯೇಸುವನ್ನು ನ್ಯಾಯತೀರ್ಪಿನ ಸಿಂಹಾಸನದ ಮುಂದೆ ಸಂದರ್ಶಿಸುವದಕ್ಕೆ ಕರೆಯಲ್ಪಡುವರು. ಯೋಗ್ಯರೆನಿಸಿಕೊಂಡವರು ನಿತ್ಯಜೀವವನ್ನು ಹೊಂದಿಕೊಳ್ಳುವರು ಮತ್ತು ಇತರರು ನಿತ್ಯವಾದ ಮರಣಕ್ಕೆ ಪಾತ್ರರಾಗಿ ತಿರುಗಿ ಮಣ್ಣಿಗೆ ಸೇರುವರು. ಯೇಸುವಿನ ಬರೋಣದಲ್ಲಿ ಇನ್ನೂ ಜೀವಿಸುತ್ತಿರುವ ಆತನ ವಿಶ್ವಾಸಿಗಳನ್ನು ಆತನು ಅವರ ಅಳಿದು ಹೋಗುವ ಸ್ಥಿತಿಯಿಂದ ಅಳಿದು ಹೋಗದ ನಿತ್ಯಜೀವಕ್ಕೆ



ಮಾರ್ಪಡಿಸುವನು(1ಕೊರಿಂಥ 15:50–57, ಫಿಲಿಪ್ಪಿ 3:20–21).

**ನಿಜವಾದ ಒಂದು ನಂಬಿಕೆ :–**

ಇವುಗಳು ಮೊದಲನೇ ಶತಮಾನದ ಕ್ರೈಸ್ತತ್ವದ ಉಪದೇಶಗಳೂ ನಂಬಿಕೆಯು ಆಗಿವೆ. ಏಕಂದರ ಇವುಗಳು ಯೇಸುಕ್ರಿಸ್ತನು ಮತ್ತು ಆತನ ಅಪೋಸ್ತಲರು ಉಪದೇಶಿಸಿದ ಸಂಗತಿಗಳೇ ಆಗಿವೆ ಮತ್ತು ರಕ್ಷಿಸುವ ನಂಬಿಕೆಯ ಅಂಶವಾಗಿದೆ. ನಾವು ನಿಜವಾಗಿ ರಕ್ಷಿಸಲ್ಪಡಲು ನಾವು ನಂಬಬೇಕಾಗಿರುವದು–ಒಂದೇ ಒಂದು ನಿಜವಾದ ಸುವಾರ್ತೆ. ಮಾನವ ಬುದ್ಧಿಯಿಂದ ಮಾಡಿದ ಎಲ್ಲಾ ಸಂಗತಿಗಳು ಕೆಟ್ಟದ್ದೂ ದಾರಿ ತಪ್ಪಿಸುವಂತದ್ದೂ ಆಗಿದೆ.

ಸತ್ಯವೇದವು ಒತ್ತಿ ಹೇಳುತ್ತದೆ–''ನಿಜವಾದ ಸುವಾರ್ತೆ ಒಂದೇ, ಒಂದೇ ನಿರೀಕ್ಷೆಗೆ ಕರೆಯಲ್ಪಟ್ಟಂತೆಯೇ ದೇಹವು ಒಂದೇ, ಆತ್ಮನು ಒಬ್ಬನೇ, ಒಬ್ಬನೇ ಕರ್ತನು, ಒಂದೇ ನಂಬಿಕೆ, ದೀಕ್ಷಾಸ್ನಾನವು ಒಂದೇ; ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ. ಆತನು ಎಲ್ಲರ ಮೇಲೆಯೂ ಎಲ್ಲರ ಮುಖಾಂತರವೂ ಎಲ್ಲರಲ್ಲಿಯೂ ಇರುವಾತನಾಗಿದ್ದಾನೆ'' (ಎಫೆಸದವರಿಗೆ 4:4–6).

ನಮಗಿರುವ ನಿರೀಕ್ಷೆಯು ಸತ್ಯವೇದದ ಆಧಾರಿತವಾದದ್ದಾಗಿದೆ ಎಂಬುದನ್ನು ಮತ್ತು ಯಾವುವು ಮನುಷ್ಯ ನಿರ್ಮಿತವಾದದಲ್ಲವೆಂಬುದನ್ನು ನಾವು ಖಚಿತಮಾಡಿಕೊಳ್ಳಬೇಕು. ಇದರಿಂದ ನಮ್ಮ ರಕ್ಷಣೆಗಾಗಿ ಮಾಡಿದ ತ್ಯಾಗದಲ್ಲಿ ತಂದೆ ಮತ್ತು ಮಗ ಇವರಿಬ್ಬರ ಗುಣ ಹಾಗೂ ಕೆಲಸವನ್ನು ಸರಿಯಾಗಿ ಅರ್ಥಮಾಡಿಕೊಂಡಿರುವವರಾಗುವೆವು.

**ನಂಬಿಕೆ ಮತ್ತು ದೀಕ್ಷಾಸ್ನಾನ :–**

ಪೌಲನು ಹೇಳಿದ್ದನ್ನು ಗಮನಿಸಿ, 'ಒಂದೇ ನಿರೀಕ್ಷೆ' ಮತ್ತು ಇದಕ್ಕೆ ಸಂಪೂರ್ಣವಾಗಿ 'ನಂಬಿಕೆ' ಹಾಗೂ 'ದೀಕ್ಷಾಸ್ನಾನ' ಈ ಎರಡರ ಅಗತ್ಯವೂ ಇದೆ ಎಂಬುದನ್ನು ಅರ್ಥೈಸಿ ಹೇಳಿದ್ದಾನೆ. ಇವುಗಳು ಕರ್ತನ ಉಪದೇಶದ ಪ್ರಧಾನ ಅಂಶಗಳಾಗಿವೆ ಮತ್ತು ಇದು ಅನುಸರಿಸಿದ ಮಾರ್ಗವನ್ನು ನಾವು ಹೊಸಒಡಂಬಡಿಕೆಯಲ್ಲಿ ಪದೇಪದೇ ಕಾಣಬಹುದು. ಪುನರುತ್ಥಾನವಾಗಿ ಬಂದ ಯೇಸು ತನ್ನನ್ನು ಹಿಂಬಾಲಿಸುವ ಜನರಿಗೆ ಆಜ್ಞಾಪಿಸಿದ್ದೇನೆಂದರೆ, ''ನೀವು ಲೋಕದ ಎಲ್ಲಾಕಡೆಗೂ ಹೋಗಿ ಪ್ರತಿಯೊಬ್ಬರಿಗೂ ಸುವಾರ್ತೆಯನ್ನು ಸಾರಿರಿ, ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ನಾಶನಕ್ಕೆ ಗುರಿಯಾಗುವನು'' (ಮಾರ್ಕ 16:15–16).

ಅದಕ್ಕಾಗಿಯೇ ಅಪೋಸ್ತಲರು ಏಷ್ಯಾ ಮತ್ತು ಯೂರೋಪ್‌ಗಳಲ್ಲೆಲ್ಲಾ ಪ್ರಯಾಣಿಸಿ ಸುವಾರ್ತೆಯನ್ನು ಸಾರಿ ಉಪದೇಶಿಸಿ ನೀರಿನಲ್ಲಿ ಮುಳುಗುವ ದೀಕ್ಷಸ್ನಾನವನ್ನು ಕೊಟ್ಟರು. ಈ ಸಂಗತಿಗಳು ಸತ್ಯವೇದದಲ್ಲಿ ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ದಾಖಲಾಗಿವೆ. ದೀಕ್ಷಾಸ್ನಾನ ಎಂಬುದು ಹಳೆಯ ಜೀವನದ ಅಂತ್ಯಕ್ಕೆ ಮತ್ತು ಕ್ರಿಸ್ತನಲ್ಲಿ ಪ್ರಾರಂಭಿಸುವ ಹೊಸ ಜೀವನಕ್ಕೆ ಒಂದು ಸೂಚನೆಯಾಗಿ ದೇವರು ನಮಗೆ ಆಜ್ಞಾಪಿಸಿರುವ ಒಂದು ಕಾರ್ಯವಾಗಿದೆ. ಒಂದು ಸಾರಿ ಸತ್ಯವೇದವನ್ನು ಅಂದರೆ **'ಜೀವಿಸುವ ದೇವರ ಮಾತುಗಳನ್ನು'** ಓದಿ ಅರ್ಥ ಮಾಡಿಕೊಂಡು ಅದನ್ನು ಸ್ವೀಕರಿಸುವಾಗ ಇದೇ ಒಳ್ಳೇ ಅವಕಾಶ ನಮಗೂ ಇದೆ. ಇದು ನಿನ್ನ ಜೀವನವನ್ನೇ ಬದಲಾಯಿಸಿ ನಿನಗೆ ಒಂದು ಹೊಸ ಪ್ರಾರಂಭವನ್ನು ನೀಡಿ ನಿನಗೆ ಈ ಹೊಸ ಜೀವನಕ್ಕೆ ಮತ್ತು ಮುಂದೆ ಸಿಗಲಿರುವ ಜೀವನಕ್ಕೆ ನಿಜವಾದ ನಿರೀಕ್ಷೆಯನ್ನು ನೀಡುತ್ತದೆ.